**ದಿನಾಂಕ:16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ಆರೋಪಿತರು ಚಾಸಾ-1 ರವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲಗೇ ಮು,ಮಾ-1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿ ವಿಚಾರಣೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

5. ಆರೋಪಿತರು ಪಿರ್ಯಾದಿಗೆ ಕರೆದು ಬೋಸುಡಿ ಮಗನೇ, ನಿನ್ನ ತಾಯಿನ ಹಡಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಮಗೆ ಬುದ್ದಿ ಹೇಳುತ್ತೀಯಾ ಕೀಳು ವಾಲ್ಮೀಕಿ ಜಾತಿ ಸೂಳೇ ಮಗನೇ ಎಂದು ಬೈದು ಜಾತಿ ನಿಂದನೆ ಮಾಡಿದರು ಎಂದರೆ ನಿಜ. 1 ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರ ತಲೆಗೆ ಹೊಡೆದಿದ್ದರಿಂದ ರಕ್ತ ಗಾಯವಾಗಿದ್ದು, ಆಗ ಭರಮಪ್ಪ ದೊಡ್ಡಪ್ಪನ ಮಗ ಹನುಮಂತಪ್ಪ ಬಂಗೇರ ಈತನು ಚಾಸಾ-1 ರವರನ್ನು ರಾಣೇಬೆನ್ನೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದರು ಎಂದರೆ ನಿಜ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ ಜಿ.ಎನ್.ಜಿ ವಕೀಲರಿಂದಃ**

6. ನಾನು ಮತ್ತು ಚಾಸಾ-1 ಒಂದೇ ಜಾತಿಗೆ ಸೇರಿರುತ್ತೇವೆಂದರೆ ನಿಜ. ನಾನು ಮತ್ತು ಚಾಸಾ-1 ರವರು ಮಾವ-ಅಳಿಯ ಎಂದು ಕರೆದುಕೊಳ್ಳುತ್ತೇವೆ ಎಂದರೆ ನಿಜ. ಬಸವರಾಜ ಹನುಮಂತಪ್ಪ ಚೌಡಣ್ಣನವರ ಚಿತ್ರದುರ್ಗದ ಹುಡುಗಿಯನ್ನು ಕರೆದುಕೊಂಡು ಬಂದ ಕಾರಣ ಆ ದಿನ ನಮ್ಮೂರಿನಲ್ಲಿ ಆರೋಪಿತರ ನಡುವೆ ಒಂದು ಪಂಚಾಯತಿ ನಡೆದಿತ್ತು ಎಂದರೆ ನಿಜ. ಆಗ 1 ನೇ ಆರೋಪಿ ಬಸವರಾಜನಿಗೆ ಈ ರೀತಿ ಮಾಡಿ ನಮ್ಮ ಮರ್ಯಾದೆ ಕಳೆಯಬೇಡ ಎಂದು ಬುದ್ದಿ ಹೇಳಿದ್ದನು ಎಂದರೆ ನನಗೆ ಗೊತ್ತಿಲ್ಲ.

7. ಆಗ ಚಾಸಾ-1 ರವರು ಪಂಚಾಯತಿ ಜಾಗಕ್ಕೆ ಹೋಗಿ ಕುಡಿದು ಗಲಾಟೆ ಮಾಡಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿ ಮನೆಯಲ್ಲಿದ್ದಾಗ ಚಾಸಾ-1 ಮತ್ತು ಅವರ ಮಕ್ಕಳು ಅಲ್ಲಿಗೆ ಹೋಗಿ ನಿನ್ನ ಜೊತೆ ಮಾತನಾಡುವುದು ಇದೆ ಎಂದು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-1 ಮತ್ತು ಅವರ ಮಕ್ಕಳು 1 ನೇ ಆರೋಪಿಗೆ

ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯ ಹೆಂಡತಿ ಮತ್ತು 2 ನೇ ಆರೋಪಿಯ ತಾಯಿ ಜಗಳ ಬಿಡಿಸಲು ಬಂದಾಗ ಚಾಸಾ–1 ಮತ್ತು ಅವರ ಮಕ್ಕಳು ಅವರಿಗೂ ಸಹ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

8. ಚಾಸಾ–1 ರವರು ತಾನಾಗೇ ಕುಡಿದು ಕೆಳಗೆ ಬಿದ್ದು ಪೆಟ್ಟು ಹಚ್ಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ–1 ರವರಿಗೆ ಬೈದಿಲ್ಲ, ಹಲ್ಲೆ ಮಾಡಿಲ್ಲ, ಜಾತಿ ನಿಂದನೆ ಮಾಡಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ಮೊದಲು ದೂರು ಕೊಡಲು ಹೋದಾಗ ಹಲಗೇರಿ ಪೊಲೀಸರು ಆತನಿಗೆ ಈ ರೀತಿ ಕುಡಿದು ಗಲಾಟೆ ಮಾಡಬೇಡ ಎಂದು ಬುದ್ದಿವಾದ ಹೇಳಿ ಕಳಿಸಿದ್ದರು ಎಂದರೆ ಸರಿಯಲ್ಲ. ಚಾಸಾ–1 ರವರು ಕುಡಿದು ಬಿದ್ದು ಗಾಯಗೊಂಡು ಚಿಕಿತ್ಸೆ ಪಡೆದುಕೊಂಡಿರುತ್ತಾರೆಯೇ ವಿನಃ ಆರೋಪಿತರು ಹೊಡೆದ ಕಾರಣಕ್ಕೆ ಅವರು ಗಾಯಗೊಂಡಿಲ್ಲ ಮತ್ತು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

9. ಮು,ಮಾ–1 ರಂತಹ ಕಲ್ಲು ಊರಿನಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ಸರಿಯಲ್ಲ, ಮು.ಮಾ–1 ರ ಮೇಲೆ ನನಗೆ ವಿಶೇಷ ಗುರುತು ಇಲ್ಲ ಎಂದರೆ ಸರಿಯಲ್ಲ. ಮು.ಮಾ–1 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಗಲಾಟೆಯಾದ ರಾತ್ರಿಯೇ ಪೊಲೀಸ್ ಠಾಣೆಗೆ ಹೋಗಿ ನಾನು ಹೇಳಿಕೆ ಕೊಟ್ಟಿದ್ದೇನೆ. ಆದರೆ ಪೊಲೀಸರ ಹುದ್ದೆಯ ಹೆಸರು ನನಗೆ ಹೇಳಲಾಗುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ನನ್ನ ಒಂದು ಸಹಿ ಮಾತ್ರ ಮಾಡಿರುತ್ತೇನೆ. ನಾನು ಆಗ್ಗಾಗ್ಗೆ ಸ್ವಲ್ಪ ಸ್ವಲ್ಪ ಮಧ್ಯಪಾನ ಮಾಡುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ಚಾಸಾ–1 ರವರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.